ವೆಂಕಟೇಶ ಮಾಚಕನೂರ ಪ್ರವಾಸ ಪ್ರಿಯರು. ನಿವೃತ್ತ ಕೆಎಎಸ್ ಅಧಿಕಾರಿ. ಮೂಲತಃ ಧಾರವಾಡದವರು. ತಮ್ಮ ಓಡಾಟದ ಅನುಭವಗಳನ್ನು, 'ನರ್ಮದೆಯ ನಾಡಿನಲ್ಲಿ', 'ಉತ್ಕಲ ವಂಗ', 'ಅಪೂರ್ವ ಪೂರ್ವ', 'ಉತ್ತರ ವಿಹಾರ', 'ಕೈಲಾಸ ಮಾನಸ' ಸೇರಿದಂತೆ ಒಟ್ಟು ಒಂಬತ್ತು ಕೃತಿಗಳಲ್ಲಿ ದಾಖಲಿಸಿದ್ದಾರೆ. ಅವರು ಬರೆದ ಪ್ರವಾಸ ಕಥನಗಳ ಭಾಗಗಳು ರಾಜ್ಯದ ನಾಲ್ಕು ವಿಶ್ವವಿದ್ಯಾಲಯಗಳ ಪದವಿ ತರಗತಿಗಳಲ್ಲಿ ಪಠ್ಯಗಳಾಗಿವೆ. ಮೂರು ಪ್ರಬಂಧ ಸಂಕಲನಗಳು ಮತ್ತು 'ಬೇರು'ಗಳು ಎಂಬ ಕಥಾ ಸಂಕಲನ ಪ್ರಕಟವಾಗಿವೆ.

ಸ್ನಾನ ಮಾಡುತ್ತಾ ಕಾಲ ಕಳೆದಳಂತೆ, ಅದೇ ಸ್ನಾನದ ಕೋಣೆಯ ಏಕಾಂತದಲ್ಲಿ ತನ್ನ ತಾನು ಸಂತೈಸಿಕೊಳ್ಳುತ್ತ ತುಂಬಾ ಹೊತ್ತು ಸ್ನಾನ ಮಾಡುತ್ತಿದ್ದಳಂತೆ. ಹೀಗಾಗಿ, ತುಂಬಾ ಹೊತ್ತು ಸ್ನಾನ ಮಾಡುವವರನ್ನು 'ಊರ್ಮಿಳಾದೇವಿ ಸ್ನಾನ' ಎಂದು ಕರೆಯುವ ಅನ್ವರ್ಥಕ ಪದ ಬಳಕೆಗೆ ಬಂದಿದೆ.

ಹುಟ್ಟಿನಿಂದ ಆರಂಭವಾಗುವ ಸ್ನಾನದ ವಿರಾಟ ರೂಪ ಜೀವನದ ವಿವಿಧ ಹಂತದಲ್ಲಿ ವಿವಿಧ ಬಗೆಯಲ್ಲಿ ಮುಂದುವರೆಯುತ್ತದೆ. ನಾವು ಚಿಕ್ಕವರಿದ್ದಾಗ ನೋಡಿದಂತೆ ಗ್ರಾಮಗಳಲ್ಲಿ ಎಳೆಯ ಮಕ್ಕಳನ್ನು ಎರೆಯುವ ಅನುಭವೀ ಮಹಿಳೆಯರು ಇದ್ದರು. ಅವರು ದಿನಾಲು ಮನೆಮನೆಗಳಿಗೆ ಹೋಗಿ ಎಳೆಯ ಮಕ್ಕಳನ್ನು ಎರೆಯುವ ಕೈಂಕರ್ಯವನ್ನು ಬಹಳ ಶ್ರದ್ಧೆಯಿಂದ ನೆರವೇರಿಸುತ್ತಿದ್ದರು. ಅದು ನೈಪುಣ್ಯದ ಕೆಲಸ. ಮೊದಲು ಕೊಬ್ಬರಿ ಎಣ್ಣೆಯಿಂದ ನೆತ್ತಿಯಿಂದ ಅಂಗಾಲವರೆಗೆ ತಪತಪ ಅನ್ನುವಂತೆ ತಿಕ್ಕಿತೀಡಿ, ನಂತರ ಕೊಡಗಟ್ಟಲೆ ಬಿಸಿ ನೀರನ್ನು ಸುರವಿ ಸ್ನಾನ ಮಾಡಿಸುತ್ತಿದ್ದರು. ಎಳೆಯ ಮಗು ಸ್ನಾನದ ನಂತರ ಸುಸ್ತು ಹೊಡೆದು ನಿದ್ರೆಗೆ ಜಾರುತ್ತಿತ್ತು. ಬಾಣಂತಿಯರ ಉಪಚಾರವು ಹಾಗೇ ನಡೆಯುತ್ತಿತ್ತು. ನನ್ನ ಅಜ್ಜ, 'ನೀ ಹುಟ್ಟಿದಾಗ ನೀರು ಹೊತ್ತು ನನ್ನ ಹೆಗಲು ದಡ್ಡ ಬಿದ್ದಿತ್ತು' ಎಂದು ನನಗೆ ಹೇಳಿದ್ದು ನೆನಪಿದೆ. ಮಕ್ಕಳು ಸ್ವಲ್ಪ ದೊಡ್ಡವರಾದ ಮೇಲೆ ಎಣ್ಣೆಯ ಸ್ನಾನ ಅನ್ನುವುದು ಆಗಾಗ ನಡೆಯುವ ಕಿರಿಕಿರಿಯ ಕ್ರಿಯೆ. ಇನ್ನು ಮಲೆನಾಡ ಮನೆಗಳಲ್ಲಿ ನಡೆಯುವ ಸ್ನಾನ, ಸ್ನಾನಕ್ಕಾಗಿ ಸದಾ ಉರಿಯುವ ಒಲೆ, ಒಲೆಗೆ ಸಂಗ್ರಹಿಸಲಾಗುವ ಮರದ ದಿಮ್ಮಿಗಳು ಇತ್ಯಾದಿ ಕುರಿತು ತಿಳಿಯಲು ಕುವೆಂಪು ಅವರ 'ಅಜ್ಜಯ್ಯನ ಅಭ್ಯಂಜನ' ಎಂಬ ಪ್ರಬಂಧವನ್ನು ಓದಬೇಕು. ಸ್ನಾನದ ಕುರಿತು ಅದೊಂದು ಒಳ್ಳೆಯ ರೂಪಕ. ಮಕ್ಕಳಿಗೆ ಎಣ್ಣೆ ಸ್ನಾನ ಅನ್ನುವುದು ಒಂದು ಹಿಂಸೆಯಾದರೆ ದೊಡ್ಡವರಿಗೆ ಎಣ್ಣೆ ಸ್ನಾನ ಮಾಡಿದರೆ ಅಥವಾ ಮಕ್ಕಳಿಗೆ ಮಾಡಿಸಿದರೆ ಏನೋ ಸಮಾಧಾನ, ಸಂತೋಷ. ಇತ್ತೀಚೆಗೆ ಎಣ್ಣೆ ಎಂಬ ಪದಕ್ಕೆ ಬೇರೆ ಅರ್ಥವೇ ಬಂದು ಬಿಟ್ಟಿದೆ.

ಹದಿಹರೆಯದಲ್ಲಿ ಈಜು ಕಲಿತ ಮೇಲೆ ಸ್ನಾನ ಅನ್ನುವುದೊಂದು ಮೋಜುಮಸ್ತಿಯ ಜಲಕ್ರೀಡೆಯಾಗುತ್ತಿದೆ. ಸ್ನಾನಕ್ಕಾಗಿ ಈಜು ಅಥವಾ ಈಜಿಗಾಗಿ ಸ್ನಾನ ಎಂಬಂತೆ ದಿನಾ ಮಧ್ಯಾಹ್ನ ತಾಸೆರಡುತಾಸು ಗೆಳೆಯರೊಂದಿಗೆ ಕೆರೆ ಬಾವಿಗಳಲ್ಲಿ ನಾವು ಚಿಕ್ಕವರಿದ್ದಾಗ ಜಲಕೇಳಿ ನಡೆಸುತ್ತಿದ್ದೆವು. ಗೆಳೆಯರ ಗುಂಪಿನೊಂದಿಗೆ, ದನಕರುಗಳೊಂದಿಗೆ 'ನೀರಾಟ' ಅನ್ನುವುದು ದೈನಂದಿನ ಮಹತ್ವದ ಕೆಲಸವಾಗುತ್ತಿತ್ತು. ಸೋಪು ಶಾಂಪೂ ಬಳಕೆಯಲ್ಲಿಲ್ಲದ ಕಾಲವದು. ಸಾಪಾದ ಕಪ್ಪುಕಲ್ಲು ಮೈ ಉಜ್ಜುವ ಸಾಧನವಾಗಿರುತ್ತಿತ್ತು. ಗೃಹಸ್ಥರಾದ ಮೇಲೆ ಸ್ನಾನದ ರೂಪ ಬದಲಾಯಿತು. ನೂರೆಂಟು ಬಗೆಯ ಸೋಪು, ಶ್ಯಾಂಪುಗಳು ಬಳಕೆಗೆ ಬಂದಮೇಲೆ ಸ್ನಾನದ ಸ್ವರೂಪವೇ ಬದಲಾಯಿತು. ಹೇನು, ಕೂರೆಗಳಿಗೆ ಆಶ್ರಯ ತಾಣವಾಗಿರುತ್ತಿದ್ದ ಗ್ರಾಮೀಣ ಮಕ್ಕಳ ತಲೆಗಳು ಬದಲಾದವು. ಅನೇಕ ಚರ್ಮದ ರೋಗಗಳು ಕೂಡ ಬರಬರುತ್ತಾ ಮಾಯವಾದವು. ಸ್ನಾನಕ್ಕೂ ಬೆನ್ನು ಉಜ್ಜುವಿಕೆಗೂ ನಿಕಟ ಸಂಬಂಧವಿದೆ. ಇಂದಿಗೂ ಕೂಡ ಸೋಪು, ಶಾಂಪೂ ಬಳಸದೆ ಕೇವಲ ಸೀಗೆ ಪುಡಿ, ಅಂಟುವಾಳ ಕಾಯಿ, ಕಡ್ಲೆಹಿಟ್ಟು, ಹರಳೆಣ್ಣೆ ಬಳಸಿ ಸ್ನಾನ ಮಾಡುವ ನನ್ನ ಒಬ್ಬಿಬ್ಬರು ಸಾವಯವ ಸ್ನೇಹಿತರು ಚೆನ್ನಾಗಿಯೇ ಇದ್ದಾರೆ.

ಕಾಲೇಜು ಹಾಸ್ಟೆಲ್ ವಾಸದ ದಿನಗಳಲ್ಲಿ ಸ್ನಾನದ ಕೋಣೆಗಳ ಹೊರಗೆ ಸರತಿ ಸಾಲಿನಲ್ಲಿ ನಿಲ್ಲಬೇಕಿತ್ತು. ಆಗ ಸ್ನಾನ ಮಾಡುವಾಗ ಸ್ನಾನದ ಮನೆಯೊಳಗಿನಿಂದ ಕೇಳಿ ಬರುತ್ತಿದ್ದ ಹಾಡುಗಳನ್ನು ಕೇಳುತ್ತಾ, ಒಳಗಿರುವವರನ್ನು ಬೈಯುತ್ತಾ ಇದ್ದುದು